# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 31 | Pages. 2 | Date: 28-12-2025, SUNDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 31 – ಪುಟಗಳು : 2 | 28-12-2025 | ಭಾನುವಾರ | Ph: 8762954248 | ದರ : ₹1


# ನಳಂದ ವಿಶ್ವವಿದ್ಯಾಲಯದ ಬೆಂಕಿಯಲ್ಲಿ ಭಾರತದ ಜ್ಞಾನವೂ ಆಹುತಿ

## ಶೃಂಗೇರಿ ಶಂಕರಾಚಾರ್ಯ ಸಂಸ್ಥಾನದ ಅದ್ವೈತಾನಂದ ಶ್ರೀ | ವಿಶ್ವ ಹಿತಚಿಂತಕರ ಸಮಾವೇಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಳಂದ ವಿಶ್ವವಿದ್ಯಾಲಯಕ್ಕೆ ಬೆಂಕಿ ಹಚ್ಚಿದಾಗ ಸುಮಾರು 4 ತಿಂಗಳ ವರೆಗೆ ಅಲ್ಲಿನ ಅಧ್ಯಯನ ಪುಸ್ತಕಗಳು ಸುಟ್ಟವು. ಅವುಗಳು ಇದ್ದಿದ್ದರೆ ಭಾರತ ಆಧ್ಯಾತ್ಮಿಕ, ಸಾಂಸ್ಕೃತಿಕವಾಗಿ ಇನ್ನಷ್ಟು ಶ್ರೀಮಂತ ರಾಷ್ಟ್ರವಾಗಿರುತ್ತಿತ್ತು ಎಂದು ಶೃಂಗೇರಿ ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನಮ್‌ನ ಮಠಾಧಿಪತಿ ಶ್ರೀ ಅದ್ವೈತಾನಂದ ಭಾರತೀ ಸ್ವಾಮೀಜಿ ಹೇಳಿದರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜಿಲ್ಲಾ ಬ್ರಾಹ್ಮಣ ಸಭಾ ವತಿಯಿಂದ ಹಮ್ಮಿಕೊಂಡಿರುವ ಎರಡು ದಿನಗಳ ದ್ವಿತೀಯ ಜಿಲ್ಲಾ ಬ್ರಾಹ್ಮಣ ಸಮ್ಮೇಳನ ಹಾಗೂ ಲೋಕಹಿತ ಕೋಟಿ ಗಾಯತ್ರಿ ಜಪಯಜ್ಞ ಸಮರ್ಪಣ ದಶಲಕ್ಷ ಗಾಯತ್ರಿ ಹವನ, ವಿಶ್ವ ಹಿತ ಚಿಂತಕರ ಸಮಾವೇಶಕ್ಕೆ ಶನಿವಾರ ಚಾಲನೆ ನೀಡಿ ಆಶೀರ್ವಚನ ನೀಡಿದರು.

### ಅಧ್ಯಯನ ಮಾಡದೆ ವೇದಗಳ ನಾಶ ಮಾಡುತ್ತಿದ್ದೇವೆ

ಭಾರತ ಋಷಿ ಮುನಿಗಳ ಬೀಡಾಗಿತ್ತು. ಆಧುನಿಕ ದಿನಗಳಲ್ಲಿ ವಿಜ್ಞಾನಿಗಳು ಮಾಡುವ ಕೆಲಸವನ್ನು ಹಿಂದೆ ಋಷಿಗಳು ಮಾಡುತ್ತಿದ್ದರು. ಗಾಯತ್ರಿ ಜಪ, ಸಂಧ್ಯಾವಂದನೆ, ಉಪನಯನ ಜೀವನದಲ್ಲಿ ಸದ್ಭಾವನೆ ಮೂಡಿಸುತ್ತದೆ. ಭಾರತದ ಧಾರ್ಮಿಕ ಇತಿಹಾಸ ಸಾಕಷ್ಟು ಶ್ರೀಮಂತವಾಗಿದೆ. ಆಕ್ರಮಣಕಾರರು ನಮ್ಮ ಸಂಪತ್ತು ಮಾತ್ರವಲ್ಲದೆ ವಿದ್ಯೆಯನ್ನು ನಾಶ ಮಾಡಿದರು. ತಾಳೆಗರಿಯಲ್ಲಿ ಬರೆದ ವೇದದ ವಿಚಾರಗಳು ಸಂಪೂರ್ಣ ನಾಶವಾದವು. ವೇದ ಜ್ಞಾನವನ್ನು ಆಕ್ರಮಣಕಾರರು ಸಂಪೂರ್ಣ ನಾಶ ಮಾಡಿದ್ದಾರೆ. ಅಲ್ಲಿ ಇಲ್ಲಿ ಸ್ವಲ್ಪ ಉಳಿದ ವೇದಗಳನ್ನು ಓದದೆ ನಾವು ನಾಶ ಮಾಡುತ್ತಿದ್ದೇವೆ ಎಂದು ಶೃಂಗೇರಿ ಶ್ರೀಗಳು ವಿಷಾದ ವ್ಯಕ್ತಪಡಿಸಿದರು.

> ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕಲಿಸುವ ಜವಾಬ್ದಾರಿ ಪೋಷಕರದ್ದಾಗಿದೆ. ಧಾವಂತದ ಬದುಕಿಗೆ ಸಿಲುಕಿ ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ. ಸಂಸ್ಕೃತಿ, ಆಚಾರ-ವಿಚಾರ, ಪದ್ಧತಿಯನ್ನು ಅನುಷ್ಠಾನಗೊಳಿಸುವಲ್ಲಿ ಸಂಪೂರ್ಣ ವಿಫಲರಾಗುತ್ತಿದ್ದೇವೆ. ಮೊದಲೆಲ್ಲ ಪೂಜೆ-ಪುನಸ್ಕಾರಕ್ಕೆ ಸಮಯ ನೀಡುತ್ತಿದ್ದೆವು. ಆದರೆ ಈಗ ಆ ಸಮಯವನ್ನು ಮೊಬೈಲ್ ಕಸಿದುಕೊಳ್ಳುತ್ತಿದೆ.
>
> **– ಶ್ರೀಶಾನಂದ, ಹೈಕೋರ್ಟ್ ನ್ಯಾಯಾಧೀಶ**

ವಿದೇಶಿ ದಾಳಿಕೋರರಿಂದ ಅಳಿಸಿ ಹೋದ ವೇದ ಜ್ಞಾನ ಅಲ್ಪ ಸ್ವಲ್ಪ ಉಳಿದಿದ್ದು ಅದನ್ನು ಭವಿಷ್ಯದ ಪೀಳಿಗೆಗೆ ಪರಿಚಯಿಸುವ ಹಾಗೂ ಆ ಮೂಲಕ ಸದೃಢ ರಾಷ್ಟ್ರ ನಿರ್ಮಿಸುವ ಕೆಲಸ ನಮ್ಮ ಕಾಲದ ಪೀಳಿಗೆಯಿಂದ ಆಗಬೇಕಿದೆ. ಧರ್ಮ ಪ್ರಚಾರವೇ ಮಠ ಮಾನ್ಯಗಳ ಉದ್ದೇಶವಾಗಿದ್ದು ಆ ನಿಟ್ಟಿನಲ್ಲಿ ಶಂಕರಾಚಾರ್ಯರು ಶೃಂಗೇರಿ ಮಾತ್ರವಲ್ಲದೆ ದೇಶದ ವಿವಿಧೆಡೆ ಧಾರ್ಮಿಕ ಕೇಂದ್ರಗಳನ್ನು ತೆರೆದರು. ಅದ್ವೈತ ಎಂದರೆ ಏಕ ಭಾವನೆ ಮೂಡಿಸುವುದಾಗಿದೆ. ದೇವರನ್ನು ಒಂದೇ ರೂಪದಲ್ಲಿ ಕಾಣುವುದಾದರೆ ಹಿಂದೂ ಧರ್ಮದಲ್ಲಿ ಮುಕ್ಕೋಟಿ ದೇವರ ಪ್ರಸ್ತಾಪನೆ ಏಕೆ, ಶಂಕರಾಚಾರ್ಯರು ವಿವಿಧೆಡೆ ಮಠಗಳ ಸ್ಥಾಪಿಸಿದ್ದು ಏಕೆ ಎಂಬ ಪ್ರಶ್ನೆ ಮೂಡುವುದು ಸಹಜ. ಎಲ್ಲಾ ರೂಪದಲ್ಲಿ ದೇವರನ್ನು ಕಾಣುವುದೇ ಹಿಂದೂ ಧರ್ಮದ ವಿಶೇಷತೆ. ಆದ್ದರಿಂದರೇ ಭಾರತೀಯ ಋಷಿ ಪರಂಪರೆಗೆ ಮಹತ್ವವಿದೆ. ಸನಾತನ ಧರ್ಮವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದವರು ಇಷ್ಟಬಂದಂತೆ ಕುಹಕದ ಮಾತುಗಳನ್ನಾಡುತ್ತಾರೆ ಎಂದರು.

ರಾಮಾಯಣ, ಮಹಾಭಾರತ ಕಾವ್ಯಗಳು ವೇದಗಳನ್ನೇ ಒಳಗೊಂಡಿವೆ. ಆದ್ದರಿಂದ ಮಕ್ಕಳಿಗೆ ಪುಸ್ತಕ ಓದುವ ಅಭಿರುಚಿ ಹೆಚ್ಚಿಸಬೇಕು. ಮನಸ್ಸಿನ ಏಕಾಗ್ರತೆ ಓದು ನೆರವಾಗುತ್ತದೆ. ಈ ನಿಟ್ಟಿನಲ್ಲಿ ವಿಪ್ರರು ಗಂಭೀರ ಚಿಂತನೆ ನಡೆಸಬೇಕೆಂದರು.

ಹೈಕೋರ್ಟ್ ನ್ಯಾಯಾಧೀಶ ವಿ. ಶ್ರೀಶಾನಂದ ಮಾತನಾಡಿ, ಸಮಾಜದಲ್ಲಿ ಬ್ರಾಹ್ಮಣರೆಂದರೆ ಭೋಜನ ಪ್ರಿಯರು ಎಂಬ ಮಾತಿದೆ. ಅದನ್ನು ತೊಡೆದು ಬಹುಜನ ಪ್ರಿಯರು ಎಂಬ ಉಕ್ತಿ ಅನುಷ್ಠಾನಕ್ಕೆ ಪಣತೊಡಬೇಕು ಎಂದರು.

ಯಾವುದೇ ಧರ್ಮ ಸದ್ವಿಚಾರ ಪ್ರತಿಪಾದಿಸುತ್ತಿದ್ದರೆ ಯಾವ ಅಳುಕಿಲ್ಲದೆ ಅದನ್ನು ಸ್ವೀಕರಿಸಬೇಕು. ಒಳ್ಳೆಯದು ಎಲ್ಲಿಂದ ಬಂದರೂ ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕು. ಸಿ.ವಿ.ರಾಮನ್, ಅಬ್ದುಲ್ ಕಲಾಂ ನಮಗೆ ಆದರ್ಶರಾಗಬೇಕು. ತಂತ್ರಜ್ಞಾನ ಯುಗದಲ್ಲಿ ಬದುಕುತ್ತಿದ್ದೇವೆಂಬ ಮಾತ್ರಕ್ಕೆ ಪುರಾತನ ಆಚಾರ ವಿಚಾರಗಳನ್ನು ಕಡೆಗಣಿಸುವುದು ಸರಿಯಲ್ಲ. ಗಾಯತ್ರಿ ಮಂತ್ರ ಪಠಣೆಯಿಂದ ಜನ್ಮ ಸಾರ್ಥಕವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ಅದನ್ನು ತಪ್ಪದೇ ಶಾಸ್ತ್ರೋಕ್ತವಾಗಿ ಮಾಡಬೇಕೆಂದು ಸಲಹೆ ನೀಡಿದರು.

ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿಕಟಪೂರ್ವ ಅಧ್ಯಕ್ಷ ಹೆಚ್.ಎಸ್. ಸಚ್ಚಿದಾನಂದಮೂರ್ತಿ ಮಾತನಾಡಿ, ಬ್ರಾಹ್ಮಣರೆಂದರೆ ಆರ್ಥಿಕವಾಗಿ ಸ್ಥಿತಿವಂತರು ಎಂಬ ಮನಸ್ಥಿತಿ ಎಲ್ಲರದ್ದಾಗಿದೆ.

ಈ ಸಮುದಾಯಲ್ಲಿಯೂ ಬಡತನ ಮಿತಿ ಮೀರಿದೆ. ರಾಜ್ಯಾದ್ಯಂತ 42 ಲಕ್ಷ ಜನರನ್ನು ಹೊಂದಿರುವ ನಮಗೆ ರಾಜಕೀಯವಾಗಿ ಪ್ರಾತಿನಿಧ್ಯ ಸಿಗಬೇಕು. ಬ್ರಾಹ್ಮಣ ಶಾಸಕರ ಸಂಖ್ಯೆ 21 ಇರಬೇಕು. ಈ ಆಸೆ ಈಡೇರಬೇಕೆಂದರೆ ಸಮುದಾಯದ ಪ್ರತಿಯೊಬ್ಬರು ಸಂಘಟಿತರಾಗಬೇಕು. ಬ್ರಾಹ್ಮಣ ಸಮಾಜ ಯಾರನ್ನೂ ದ್ವೇಷಿಸುವುದಿಲ್ಲ. ಆದರೆ ನಮ್ಮಷ್ಟು ಟೀಕೆ, ಹೀಯಾಳಿಕೆಗೆ ಗುರಿಯಾದ ಸಮಾಜ ಮತ್ತೊಂದಿಲ್ಲ ಎಂದರು.

ಜಿಲ್ಲಾ ಬ್ರಾಹ್ಮಣ ಸಭಾದಿಂದ 30 ಗುಂಟೆ ಜಾಗದಲ್ಲಿ ನೂತನ ಸಭಾ ಭವನ ನಿರ್ಮಿಸಲು ನಿರ್ಧರಿಸಿದ್ದು ಶೃಂಗೇರಿ ಶ್ರೀಗಳು ಶಿಲಾನ್ಯಾಸ ನೆರವೇರಿಸಿದರು. ಟೀಂ ಮಂಗಳೂರು ಇಂಡಿಯಾ ತಂಡದಿಂದ ಗಾಳಿಪಟ ಹಾರಾಟ ಪ್ರದರ್ಶನ, ಮಹಿಳೆಯರ ಕೈಗಳಿಗೆ ಮಹೆಂದಿ ವಿನ್ಯಾಸ ಕಾರ್ಯಕ್ರಮ ಜರುಗಿತು. ಜಿಲ್ಲೆಯ ವಿವಿಧ ಭಾಗಗಳಿಂದ ಬ್ರಾಹ್ಮಣ ಸಮುದಾಯದವರು ಭಾಗವಹಿಸಿದ್ದರು.

ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷ ಹೆಚ್.ಎಸ್.ಮಂಜುನಾಥಮೂರ್ತಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಪ್ರತಿನಿಧಿ ಪಿ.ಎಸ್. ವೆಂಕಟೇಶ್, ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ ಆಡಳಿತ ಸಮಿತಿ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ, ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡಳ್ಳಿ, ಶಂಕರಮಠದ ಧರ್ಮಾಧಿಕಾರಿ ಶ್ರೀಂಕಠಯ್ಯ, ಶ್ರೀನಿವಾಸಮೂರ್ತಿ, ಕೃಷ್ಣಾನಂದ ಮತ್ತಿತರರಿದ್ದರು.

## ಗ್ಯಾರಂಟಿ ಸಮಿತಿ ಪದಾಧಿಕಾರಿಗಳಿಂದ ಬಸ್ ನಿಲ್ದಾಣ ಪರಿಶೀಲನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಲ್.ಪಿ.ಪ್ರಕಾಶ್ ಗೌಡ ನೇತೃತ್ವದಲ್ಲಿ ಶನಿವಾರ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಮೂಲಸೌಕರ್ಯಗಳ ಪರಿಶೀಲನೆ ನಡೆಸಲಾಯಿತು.

ಮಹಿಳಾ ಪ್ರಯಾಣಿಕರೊಂದಿಗೆ ಶಕ್ತಿ ಯೋಜನೆಯ ಕುರಿತಾಗಿ ಸಾಧಕ-ಬಾಧಕ ಚರ್ಚಿಸಿದರು. ನಂತರ ನಿಲ್ದಾಣದ ಶೌಚಾಲಯವನ್ನು ವೀಕ್ಷಿಸಿ ಶುಚಿತ್ವವಿಲ್ಲದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಮೂತ್ರ ವಿಸರ್ಜನೆಗೆ 2 ರೂ. ಬದಲಾಗಿ 5 ರೂ. ಪಡೆಯುತ್ತಿರುವ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಟೆಂಡರ್‌ದಾರರನ್ನು ಪ್ರಶ್ನಿಸಿದರು. ನಂತರ ಹೋಟೆಲ್‌ಗೆ ತೆರಳಿದರು. ಅಲ್ಲಿನ ಅಡುಗೆ ಕೋಣೆ, ಸಿಬ್ಬಂದಿ ಜೊತೆಗೆ ಚರ್ಚೆ ನಡೆಸಿ, ಇಡ್ಲಿಗೆ ಬಳಸುವ ಬಟ್ಟೆ, ಅಡುಗೆಗೆ ಬಳಸುವ ಪಾತ್ರೆ, ಪರಿಕರಗಳನ್ನು ಪರಿಶೀಲನೆ ನಡೆಸಿ, ತಿಂಡಿಯ ರುಚಿ ನೋಡಿ ಹೋಟೆಲ್‌ನಲ್ಲಿ ಶುಚಿತ್ವ ಕಾಪಾಡುವುದರ ಜೊತೆಗೆ ಗುಣಮಟ್ಟ ಕಾಯ್ದುಕೊಳ್ಳುತ್ತಿರುವ ಮೆಚ್ಚುಗೆ ವ್ಯಕ್ತಪಡಿಸಿ ಅಡುಗೆಗೆ ಬಳಸುವ ಕೆಲ ಪಾತ್ರೆ ಸೇರಿ ಪರಿಕರಗಳನ್ನು ಬದಲಾಯಿಸುವಂತೆ ಸೂಚಿಸಿದರು.

ಗ್ಯಾರಂಟಿ ಸಮಿತಿ ಸದಸ್ಯರಾದ ರಂಗಸ್ವಾಮಿ, ನವೀನ್, ಅರಳಾಪುರ ನಾಗೇಶ್, ಜನಾರ್ಧನ್, ರಂಗಸ್ವಾಮಿ, ಚೋಳೇನಹಳ್ಳಿ ಗಣೇಶ್, ಬಸ್ ನಿಲ್ದಾಣದ ಘಟಕ ವ್ಯವಸ್ಥಾಪಕ ನೂತನ್, ನಿಲ್ದಾಣಾಧಿಕಾರಿ ಕೃಪಾಕರ್, ಜಗದೀಶ್ ಇದ್ದರು.

## ಬಾಂಗ್ಲಾದೇಶಕ್ಕೆ ಸ್ವಾತಂತ್ರ್ಯ ಕೊಡಿಸಿದ್ದು ಭಾರತ ಎಂಬುದು ನೆನಪಿರಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಸಕಲೇಶಪುರ: ಪ್ರಪಂಚದಲ್ಲಿ ಶಾಂತಿಯನ್ನು ಸಾರುತ್ತಿರುವ ಭಾರತದ ತಾಳ್ಮೆಯನ್ನು ಅನ್ಯ ರಾಷ್ಟ್ರಗಳು ಪರೀಕ್ಷಿಸಬಾರದು. ಬಾಂಗ್ಲಾದೇಶ ಸ್ವಾತಂತ್ರ್ಯಕ್ಕೆ ಭಾರತೀಯ ಸೇನೆಯ ತ್ಯಾಗ ಮರೆಯಬಾರದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಬಾಂಗ್ಲಾದೇಶದಲ್ಲಿ ಹಿಂದುಗಳ ಮೇಲೆ ನಡೆಯುತ್ತಿರುವ ಹತ್ಯೆ ಹಾಗು ಹಲ್ಲೆಗಳನ್ನು ಖಂಡಿಸಿ ಪಟ್ಟಣದಲ್ಲಿ ಶನಿವಾರ ವಿಶ್ವ ಹಿಂದು ಪರಿಷತ್ ಮತ್ತು ಬಜರಂಗ ದಳದಿಂದ ಸ್ವಯಂ ಪ್ರೇರಿತ ಬಂದ್ ಹಾಗೂ ಪ್ರತಿಭಟನೆಯಲ್ಲಿ ಮಾತನಾಡಿ, ಭಾರತೀಯರು ಶಾಂತಿ ಪ್ರಿಯರು. ಆದರೆ ನಮ್ಮ ತಾಳ್ಮೆ ಹಾಗೂ ಸಂಯಮವನ್ನು ಹೆಚ್ಚು ಪರೀಕ್ಷಿಸುವಂತಿಲ್ಲ. ಈಗಾಗಲೇ ಅನ್ಯ ರಾಷ್ಟ್ರಗಳಿಗೆ ನಮ್ಮ ದೇಶದ ಶಕ್ತಿಯನ್ನು ತೋರಿಸಿದ್ದೇವೆ ಎಂದು ಹೇಳಿದರು.

ಬಾಂಗ್ಲಾದೇಶದಲ್ಲಿ ಮತಾಂಧ ಶಕ್ತಿಗಳಿಂದ ನಡೆಯುತ್ತಿರುವ ಹತ್ಯೆ ಮತ್ತು ಹಲ್ಲೆಗಳು ಖಂಡನೀಯ. ಬಾಂಗ್ಲಾದೇಶದಲ್ಲಿ ಹತ್ಯೆಗೀಡಾದ ರಾಮದಾಸ್ ಪ್ರಕರಣಕ್ಕೆ ಭಾರತ ತಕ್ಕ ಉತ್ತರ ನೀಡಲಿದೆ ಎಂದು ಎಚ್ಚರಿಕೆ ನೀಡಿದರು.

ನಮ್ಮ ದೇಶದ ಸೈನಿಕರ ಪ್ರಾಣ ತ್ಯಾಗದ ಫಲವಾಗಿ ಸ್ವಾತಂತ್ರ್ಯ ಪಡೆದಿರುವ ಬಾಂಗ್ಲಾದೇಶ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು. ಸ್ಥಳೀಯವಾಗಿ ನುಸುಳಿರುವ ಅಕ್ರಮ ಬಾಂಗ್ಲಾ ನುಸುಳುಕೋರರನ್ನು ಪೊಲೀಸರು ಪತ್ತೆ ಹಚ್ಚಬೇಕು. ಕಾಫಿ ಬೆಳೆಗಾರರು ತಮ್ಮ ತೋಟಗಳಲ್ಲಿ ಕೆಲಸಕ್ಕೆ ಬರುವ ಕೂಲಿ ಕಾರ್ಮಿಕರ ದಾಖಲೆಗಳನ್ನು ಪರಿಶೀಲಿಸಬೇಕು. ಯಾವುದೇ ಅನುಮಾನ ಕಂಡುಬಂದರೆ ಪೊಲೀಸರಿಗೆ ಮಾಹಿತಿ ನೀಡಬೇಕು. ಇಲ್ಲದಿದ್ದರೆ ನಮ್ಮ ಜೀವಕ್ಕೆ ಅಪಾಯ ಸಂಭವಿಸುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಆರ್‌ಎಸ್‌ಎಸ್ ಮುಖಂಡ ಅಣ್ಣಪ್ಪ ಸ್ವಾಮಿ ಮಾತನಾಡಿ, ಸ್ಥಳೀಯವಾಗಿ ನುಸುಳಿರುವ ಅಕ್ರಮ ಬಾಂಗ್ಲಾ ಹಾಗೂ ರೋಹಿಂಗ್ಯಾ ಮುಸ್ಲಿಮರಿಂದ ಸಮಾಜಕ್ಕೆ ಕಂಟಕ ಎದುರಾಗಿದೆ. ಕಡಿಮೆ ಸಂಬಳಕ್ಕೆ ಕೆಲಸಕ್ಕೆ ಬರುತ್ತಿರುವವರ ಹಿಂದೆ ಬೇರೆ ಉದ್ದೇಶಗಳಿವೆ. ಅವರಿಂದ ಸಮಾಜದಲ್ಲಿ ಕಳ್ಳತನ, ಸುಲಿಗೆ ಹಾಗೂ ಅಕ್ರಮ ಮಾದಕ ವಸ್ತುಗಳ ವಹಿವಾಟು ನಡೆಯುತ್ತಿದೆ. ಗುಂಪು ಗುಂಪಾಗಿ ಬಂದು ಸ್ಥಳೀಯರ ಸಹಕಾರದಿಂದ ಆಧಾರ್ ಹಾಗೂ ಮತದಾರರ ಪಟ್ಟಿಗೆ ಸೇರಿಕೊಳ್ಳುತ್ತಿರುವುದು ನಮ್ಮ ವ್ಯವಸ್ಥೆಯ ದೊಡ್ಡ ದುರಂತ ಎಂದು ವಿಷಾದ ವ್ಯಕ್ತಪಡಿಸಿದರು.

ಹೋರಾಟಗಾರ ಯಡೇಹಳ್ಳಿ ಮಂಜುನಾಥ್ ಮಾತನಾಡಿ, ತಾಲ್ಲೂಕಿನ ಅಕ್ರಮ ವಲಸಿಗರಿಂದ ಗಾಂಜ ಸೇರಿದಂತೆ ಇನ್ನಿತರ ಮಾದಕ ವಸ್ತುಗಳು ಪೂರೈಕೆಯಾಗುತ್ತಿರುವುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಕ್ರಮ ವಹಿಸಬೇಕೆಂದು ಹೇಳಿದರು. ಸ್ವಯಂ ಪ್ರೇರಿತ ಬಂದ್ ಹಿನ್ನೆಲೆಯಲ್ಲಿ ಪ್ರತಿಭಟನೆ ಪಟ್ಟಣದ ಬಹುತೇಕ ಅಂಗಡಿ-ಮುಂಗಟ್ಟುಗಳು ಮುಚ್ಚಿದ್ದವು. ಡಿವೈಎಸ್‌ಪಿ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಯಿತು. ವಿಶ್ವ ಹಿಂದು ಪರಿಷತ್ ಮುಖಂಡರಾದ ರಘು, ವಿಷ್ಣುರಾವ್, ಕರಡಿಗಾಲ ಹರೀಶ್, ವಿಜಯಕುಮಾರ್, ಗೊಡುಮನೆ ಪರಮೇಶ್, ಕೀರುವಾಲೆ ಶಶಿಕುಮಾರ್ ಹಾಗೂ ಇತರರಿದ್ದರು.

## ಸರ್ಕಾರಿ ಶಾಲೆಯಲ್ಲಿ ಗಣಿತ ದಿನಾಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಗಬ್ಬಲಗೋಡು ಸರ್ಕಾರಿ ಪ್ರೌಢಶಾಲೆ ಹಾಗೂ ಚಿಕ್ಕಮೇದೂರು ಪ್ರಾಥಮಿಕ ಶಾಲೆಯಲ್ಲಿ ಗಣಿತ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಶ್ರೀನಿವಾಸ ರಾಮಾನುಜನ್ ಅವರ ಭಾವಚಿತ್ರ ಅನಾವರಣಗೊಳಿಸುವ ಮೂಲಕ ಉದ್ಘಾಟಿಸಲಾಯಿತು. ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಯಾಕೂಬ್ ಕೊಯ್ಯೂರ್ ಮಾತನಾಡಿ, ಗಣಿತ ದಿನಾಚರಣೆಯ ಔಚಿತ್ಯ ಹಾಗೂ ರಾಮಾನುಜನ್ ಅವರ ಕೊಡುಗೆಯ ಬಗ್ಗೆ ತಿಳಿಸಿದರು. ಪ್ರಭಾರ ಮುಖ್ಯ ಶಿಕ್ಷಕ ಹೆಚ್.ಪಿ.ಗಿರೀಶ್ ಮಾತನಾಡಿ, ಭಾರತದ ಗಣಿತ ದಂತಕಥೆ ಎಂದೇ ಖ್ಯಾತರಾದ ಶ್ರೀನಿವಾಸ ರಾಮಾನುಜನ್ ಅವರ ಜನ್ಮ ದಿನದ ಪ್ರಯುಕ್ತ ರಾಷ್ಟ್ರೀಯ ಗಣಿತ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಅವರ ಜೀವನ , ರಾಮಾನುಜನ್ ಸಂಖ್ಯೆ, ಅವರ ಗಣಿತಾಸಕ್ತಿಯನ್ನು ಸ್ಮರಿಸಿದರು.

ಮಕ್ಕಳಿಗಾಗಿ ಗಣಿತ ರಂಗೋಲಿ ಸ್ಪರ್ಧೆ, ರಸ ಪ್ರಶ್ನೆ, ಗಣಿತ ಮಾದರಿ ತಯಾರಿಕಾ ಸ್ಪರ್ಧೆ ಏರ್ಪಡಿಸಲಾಗಿತ್ತು. ಚಿಕ್ಕಮೇದೂರು ಪ್ರಾಥಮಿಕ ಶಾಲೆಯ ಮಕ್ಕಳು ಗಣಿತ ರಂಗೋಲಿ ಬಿಡಿಸುವುದರ ಮೂಲಕ ಖುಷಿಪಟ್ಟರು. ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ಹಾಲಪ್ಪ ವಹಿಸಿದ್ದರು. ಮುಖ್ಯೋಪಾಧ್ಯಾಯ ರೆಹಮತ್, ಶಿಕ್ಷಕರಾದ ಶಿಲ್ಪ, ರವೀಶ್, ಸಂದೀಪ್, ಉಮೇಶ್, ಭದ್ರೇಗೌಡ, ಗಬ್ಬಲಗೋಡು ಪ್ರೌಢಶಾಲೆಯ ಶಿಕ್ಷಕಿ ಶಾಂತಿ ಪಿಂಟೋ, ನವೀನ ಫಿರ್ದೋಸ್, ಕಾವ್ಯಶ್ರೀ, ನಟರಾಜ್, ಜಾಹ್ನವಿ, ಗೀತಾ, ಸತೀಶ್ ಮತ್ತಿತರರಿದ್ದರು.

## ಡಾ. ಎ.ಸಿ.ಎಂ. ಜನ್ಮದಿನ: ಜಿಲ್ಲಾ ಮಟ್ಟದ ಕರಾಟೆ-ಜುಡೋ ಸ್ಪರ್ಧೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದ ಮಹಾರಾಜ ಪಾರ್ಕ್ ಆವರಣದಲ್ಲಿರುವ ಹೆಲ್ತ್ ಜಿಮ್ ಆವರಣದಲ್ಲಿ ಜಿಲ್ಲಾ ಕ್ರೀಡಾ ಪರಿಷತ್ ವತಿಯಿಂದ ಖ್ಯಾತ ಹಿರಿಯ ವೈದ್ಯ ಹಾಗೂ ಸಮಾಜ ಸೇವಕ ದಿ.ಡಾ. ಎ.ಸಿ. ಮುನಿವೆಂಕಟೇಗೌಡ ಅವರ ಜನ್ಮದಿನದ ಅಂಗವಾಗಿ ಇದೇ ಮೊದಲ ಬಾರಿಗೆ ಜಿಲ್ಲಾ ಮಟ್ಟದ ಕರಾಟೆ ಮತ್ತು ಜುಡೋ ಎರಡು ದಿನಗಳ ಸ್ಪರ್ಧೆಗೆ ಹಸಿರು ಭೂಮಿ ಪ್ರತಿಷ್ಠಾಪನ ಸಂಸ್ಥಾಪಕ ಆರ್.ಪಿ. ವೆಂಕಟೇಶ್ ಮೂರ್ತಿ ಗಿಡಕ್ಕೆ ನೀರು ಹಾಕುವ ಮೂಲಕ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಒಬ್ಬ ಸರಕಾರಿ ವೈದ್ಯರಾಗಿ ಹಾಸನಕ್ಕೆ ಬಂದು ನಂತರ ಜನತಾ ಕ್ಲಿನಿಕ್ ಸ್ಥಾಪನೆ ಮಾಡಿ ಕಡಿಮೆ ವೆಚ್ಚದಲ್ಲಿ ಅತ್ಯಂತ ಗುಣ ಮಟ್ಟದ ವೈದ್ಯಕೀಯ ಸೇವೆ ನೀಡುತ್ತಾ ಅಪಾರ ಜನಮನ್ನಣೆಗಳಿಸಿದವರು. ಎಲ್ಲಾ ತರಹದ ಸಾಮಾಜಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುತ್ತಾ ಬಂದರು. ಸಂಜೀವಿನಿ ಸಹಕಾರ ಆಸ್ಪತ್ರೆಯಲ್ಲೂ ಕೂಡ ಅವರದು ದೊಡ್ಡ ಪಾತ್ರವಿದೆ ಎಂದರು.

ಕ್ರೀಡಾ ಪರಿಷತ್ತಿನ ಕಾರ್ಯದರ್ಶಿ ನಿರಂಜನ್ ಮತ್ತು ಅವರ ತಂಡ ಕ್ರೀಡೆಗಳನ್ನು ನಡೆಸುತ್ತಾ ಬರುತ್ತಿದೆ. ಜೂಡೋ ಬಗ್ಗೆ ಇಲ್ಲಿ ಅಷ್ಟೊಂದು ಪರಿಚಯ ಇಲ್ಲ. ಇಂತಹ ಸ್ಪರ್ಧೆ ಉಪಯುಕ್ತವಾಗಿದೆ ಎಂದು ಕಿವಿಮಾತು ಹೇಳಿದರು. ಈ ಸ್ಪರ್ಧೆ ಕೂಡ ಎರಡು ದಿನಗಳ ಕಾಲ ನಡೆಯಲಿದ್ದು, ಇದರಲ್ಲಿ ಕ್ರೀಡಾಪಟುಗಳು ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಡಾ.ಎ.ಸಿ.ಎಂ. ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಜಯಲಕ್ಷ್ಮಿ ಮುನಿವೆಂಕಟೇಗೌಡ ಮಾತನಾಡಿ, ಡಾ. ಎ.ಸಿ. ಮುನಿವೆಂಕಟೇಗೌಡರು ಕ್ರೀಡಾ ಮನೋಭಾವ ಹೊಂದಿದವರು. ಚಿಕ್ಕ ವಯಸ್ಸಿನಲ್ಲಿಯೇ ಪ್ರತಿ ಆಟಕ್ಕೂ ಮಹತ್ವ ಕೊಡುತ್ತಿದ್ದರು. ಹಳ್ಳಿಗಳ ಆಟೋಟ ಹಾಗೂ ಬೆಳೆಯುತ್ತಾ ಶಾಲಾ ಕಾಲೇಜಿನಲ್ಲಿಯೂ ಕ್ರೀಡೆಯಲ್ಲಿ ಭಾಗವಹಿಸುತ್ತಿದ್ದರು. ಅನೇಕ ಪ್ರಶಸ್ತಿ ಪಡೆದುಕೊಂಡಿದ್ದರು. ಕ್ರೀಡೆ ಮತ್ತು ಸಂಗೀತದ ಹವ್ಯಾಸ ಅಳವಡಿಸಿಕೊಂಡು ಬಂದಿದ್ದರು. ನಿರಂಜನ್ ಅವರ ಸಹಕಾರದಲ್ಲಿ ಇಂತಹ ಕ್ರೀಡೆಗಳು ನಡೆಯುತ್ತಾ ಬರುತ್ತಿದೆ ಎಂದು ಹೇಳಿದ ಅವರು ಇಂತಹ ಕ್ರೀಡೆ ಮೂಲಕ ದೇಶಕ್ಕೆ ಕೀರ್ತಿ ತರಬೇಕೆಂದು ಹಾರೈಸಿದರು.

ಜಿಲ್ಲಾ ಅಮೆಚೂರು ಬಾಡಿ ಬಿಲ್ಡರ್ ಸಂಸ್ಥೆ ಜಿಲ್ಲಾಧ್ಯಕ್ಷ ಎ.ಎಂ. ಶರತ್ ಚಂದ್ರ ಮಾತನಾಡಿ, ನಮ್ಮ ತಂದೆ ಅವರು ಯುವಕರಿಗೆ ಪ್ರೇರಕ ಶಕ್ತಿಯಾಗಿದ್ದರು. ಯಾವುದೇ ತೀರ್ಮಾನ ಮೌಲ್ಯಾಧಾರಿತ ಆಗಿರಬೇಕು. ಯಾವ ಸಂದರ್ಭದಲ್ಲಿ ಏನೇ ಕಷ್ಟ ಬಂದರೂ ತಮ್ಮ ಮೌಲ್ಯ ಕಳೆದುಕೊಳ್ಳಬೇಡಿ. ಶಿಸ್ತು ಅನ್ನುವುದನ್ನು ಬೆಳೆಸಿಕೊಂಡರೆ ಜೀವನದಲ್ಲಿ ಏನಾದರೂ ಸಾಧನೆ ಮಾಡಬಹುದು. ಯಾವುದೇ ಸಾಧನೆ ಮಾಡಬೇಕಾದರೆ ನಿಮ್ಮ ಮನಸ್ಸನ್ನು ಬೇರೆಡೆಗೆ ಹರಿಯ ಬಿಡಬೇಡಿ ಎಂದರು. ನಮ್ಮ ತಂದೆಯ ಒಡನಾಟ ಹೊಂದಿದ್ದ ನಿರಂಜನ್ ಅವರು ಹಲವು ವರ್ಷಗಳಿಂದ ಇಂದಿನವರೆಗೂ ತಮ್ಮ ಮೌಲ್ಯಗಳು, ಕ್ರೀಡಾ ಮನೋಭಾವ ಉಳಿಸಿಕೊಂಡು ಬಂದಿದ್ದಾರೆ ಎಂದು ಬಣ್ಣಿಸಿದರು.

ಜಿಲ್ಲಾ ಮಟ್ಟದ ಕ್ರೀಡೆಯಲ್ಲಿ ವಿವಿಧ ಭಾಗಗಳಿಂದ ಬಂದಿದ್ದ ಕ್ರೀಡಾಪಟುಗಳು ಭಾಗವಹಿಸಿ ಗಮನಸೆಳೆದರು.

ಕಾರ್ಯಕ್ರಮದಲ್ಲಿ ಜೂಡೋ ತರಬೇತುದಾರರಾದ ತ್ರಿವೇಣಿ, ಕ್ರೀಡಾ ಪರಿಷತ್ತು ಸದಸ್ಯೆ ಚಂದ್ರಮ್ಮ, ಚಂದ್ರೇಗೌಡ, ರಂಗಸ್ವಾಮಿ, ಕ್ರೀಡಾ ಪರಿಷತ್ ಕಾರ್ಯದರ್ಶಿ ನಿರಂಜನ್, ಜುಡೋ ಉಪಾಧ್ಯಕ್ಷ ಶಿವಾನಂದ್, ತೀರ್ಪುಗಾರರು ಪೂಜಾ, ಹೇಮಾಲತಾ, ರಾಜೇಶ್, ಮಹದೇವ್, ಪವರ್ ಲಿಫ್ಟಿಂಗ್ ಹನುಮಂತೇಗೌಡ, ಚಂದ್ರಕಲಾ, ಲೀಲಾವತಿ ಇದ್ದರು. ಗ್ರೀಷ್ಮಾ, ಅನುಷಾ, ಪ್ರಣತಿ ಪ್ರಾರ್ಥಿಸಿದರೆ, ಭಾನುಮತಿ ನಿರೂಪಿಸಿದರು. ಪತ್ರಕರ್ತ ಬ್ಯಾಕರವಳ್ಳಿ ವೆಂಕಟೇಶ್ ಸ್ವಾಗತಿಸಿದರು.

## ಹುಬ್ಬಳ್ಳಿ ಮರ್ಯಾದೆ ಹತ್ಯೆ ಖಂಡನೀಯ ಕಠಿಣ ಕಾನೂನು ಜಾರಿಗೊಳಿಸಿ




ಹಾಸನ: ಹುಬ್ಬಳ್ಳಿ ಜಿಲ್ಲೆಯ ಇನಾಂವೀರಾಂಪುರದಲ್ಲಿ ನಡೆದ ಗರ್ಭಿಣಿ ಮಾನ್ಯಳ ಮರ್ಯಾದೆ ಹತ್ಯೆ ಆರೋಪಿಗಳನ್ನು ಕೂಡಲೇ ಬಂಧಿಸಿ ಹಲ್ಲೆಗೊಳ್ಳಗಾಗಿರುವ ವಿವೇಕಾನಂದ ಕುಟುಂಬಕ್ಕೆ ಸರ್ಕಾರ ಸೂಕ್ತ ರಕ್ಷಣೆ ನೀಡಬೇಕು ಎಂದು ದ್ರಾವಿಡ ಆರ್ಮಿ ರಾಜ್ಯಾಧ್ಯಕ್ಷ ಸಂಪತ್ ಸುಬ್ಬಯ್ಯ ಒತ್ತಾಯಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹುಬ್ಬಳಿಯಲ್ಲಿ ನಡೆದಿರುವ ಮರ್ಯಾದೆ ಹತ್ಯೆ ಅತ್ಯಂತ ಖಂಡನೀಯ. ಇದು ಒಂದು ಜಾತಿ ಭಯೋತ್ಪಾದನೆಯ ಕೃತ್ಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಘಟನೆ ನಡೆದು ಒಂದು ವಾರ ಕಳೆದರೂ ರಾಜ್ಯ ಸರ್ಕಾರದ ಗೃಹ ಸಚಿವರಾಗಲಿ, ಮಹಿಳಾ ಮತ್ತು ಮಕ್ಕಳ ಸಚಿವರಾಗಲಿ, ಮಹಿಳಾ ಆಯೋಗದ ಅಧ್ಯಕ್ಷರಾಗಲಿ, ಹುಬ್ಬಳ್ಳಿ-ಧಾರವಾಡ ಉಸ್ತುವಾರಿ ಸಚಿವರಾಗಲಿ ಹಾಗೂ ಹುಬ್ಬಳ್ಳಿಯ ಜಿಲ್ಲಾಡಳಿತವಾಗಲಿ ಹಲ್ಲೆಗೊಳಗಾಗಿ ನೊಂದ ಕುಟುಂಬಕ್ಕೆ ಸಾಂತ್ವನ ಹೇಳದಿರುವುದಕ್ಕೆ ತೀವ್ರ ಆಕ್ರೋಶ ಹೊರ ಹಾಕಿದರು.

ಬಾಂಗ್ಲಾದೇಶದಲ್ಲಿ ಹಿಂದು ಯುವಕನ ಹತ್ಯೆ ಖಂಡಿಸಿ ಹಿಂದುಪರ ಸಂಘಟನೆಗಳು ದೇಶಾದ್ಯಂತ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ ಖಂಡನೆ ವ್ಯಕ್ತಪಡಿಸಿದ್ದರು. ಆದರೆ ಕಣ್ಣೆದುರಲ್ಲೇ ಮರ್ಯಾದೆ ಹತ್ಯೆ ನಡೆದರೂ ಅದರ ಬಗ್ಗೆ ಯಾವೊಬ್ಬ ಹಿಂದು ಮುಖಂಡರು ಧ್ವನಿ ಎತ್ತದೆ ಇರುವುದು ವಿಷಾದನೀಯ ಎಂದರು.

ಘಟನೆಯಲ್ಲಿ ಭಾಗಿಯಾದ ಎಲ್ಲಾ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸ್ ಇಲಾಖೆಯ ವೈಫಲ್ಯ ಎದ್ದು ಕಾಣುತ್ತದೆ ಹಾಗೂ ಆರೋಪಿಗಳನ್ನು ಬಂಧಿಸಬೇಕು ಹಾಗೂ ಹಲ್ಲೆಗೊಳಗಾದ ವಿವೇಕಾನಂದ ಕುಟುಂಬಕ್ಕೆ ಸರ್ಕಾರ ಸೂಕ್ತ ರಕ್ಷಣೆ ಹಾಗೂ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

# ಭದ್ರಕೋಟೆ ಉಳಿಸಿಕೊಳ್ಳಲು ಜೆಡಿಎಸ್ ರಣತಂತ್ರ


## ಜನವರಿ ಅಂತ್ಯಕ್ಕೆ ಬೃಹತ್ ಸಮಾವೇಶ | ಸ್ಥಳೀಯ ಸಂಸ್ಥೆ ಚುನಾವಣೆ ಗುರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಳೆದ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಖಾತೆ ತೆರೆದಿರುವ ಕಾಂಗ್ರೆಸ್ ಗೆಲುವಿನ ಓಟ ಮುಂದುವರಿಸಲು ಸಿದ್ಧತೆ ನಡೆಸಿದ್ದು ಭದ್ರಕೋಟೆಯಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಜೆಡಿಎಸ್ ಶತಾಯ ಗತಾಯ ಪ್ರಯತ್ನ ಮುಂದುವರಿಸಿದೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಎರಡೂವರೆ ವರ್ಷದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರನ್ನು ಸೇರಿಸಿ ಹಾಸನ ನಗರದಲ್ಲಿ ಎರಡು, ಅರಸೀಕೆರೆಯಲ್ಲಿ ಒಂದು ಬೃಹತ್ ಸಮಾವೇಶ ನಡೆಸಲಾಗಿದೆ. ಆದರೆ, ಕಳೆದ ಲೋಕಸಭೆ ಚುನಾವಣೆ ವೇಳೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣದಿಂದ ಜೆಡಿಎಸ್ ಕಾರ್ಯಕರ್ತರು ಮುಜುಗರಕ್ಕೆ ಒಳಗಾಗಿ ಉತ್ಸಾಹ ಕಳೆದುಕೊಂಡಿದ್ದರು.

ಜಿಲ್ಲಾ ಜೆಡಿಎಸ್ ಕಾರ್ಯಕರ್ತರಿಗೆ ಚೈತನ್ಯ ತುಂಬುವ ನಿಟ್ಟಿನಲ್ಲಿ ಸಮಾವೇಶ ನಡೆಸುವುದಾಗಿ ಪಕ್ಷದ ರಾಜ್ಯಾಧ್ಯಕ್ಷ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹಲವು ಬಾರಿ ಹೇಳಿದ್ದರೂ ಕಾರ್ಯರೂಪಕ್ಕೆ ಬಂದಿರಲಿಲ್ಲ. ಇದೀಗ ಪಕ್ಷದ ರಾಷ್ಟ್ರೀಯ ಅಧ್ಯಕ್ಷ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೇ ಅಖಾಡಕ್ಕಿಳಿದು ಜನವರಿಯಲ್ಲಿ ಜಿಲ್ಲೆಯಲ್ಲಿ ಬೃಹತ್ ಜೆಡಿಎಸ್ ಸಮಾವೇಶ ನಡೆಸುವುದಾಗಿ ಘೋಷಿಸಿದ್ದಾರೆ.



### ಕಾಂಗ್ರೆಸ್‌ಗೆ ಟಕ್ಕರ್ ಕೊಡಲು ಸಿದ್ಧತೆ

ಮಾಜಿ ಪ್ರಧಾನಿ ದೇವೇಗೌಡರ ತವರು ಜಿಲ್ಲೆಯಲ್ಲಿ ಕಾಂಗ್ರೆಸ್ ನಾಯಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜಿಲ್ಲೆಯಲ್ಲಿ ಒಂದರ ಮೇಲೊಂದು ಸಮಾವೇಶ ಆಯೋಜಿಸುವ ಮೂಲಕ ರಾಜಕೀಯ ಚಟುವಟಿಕೆ ಗರಿಗೆದರುವಂತೆ ಮಾಡಿದ್ದಾರೆ. ಇದಕ್ಕೆ ತಿರುಗೇಟು ನೀಡುವ ಉದ್ದೇಶದಿಂದ ದೇವೇಗೌಡರ ನೇತೃತ್ವದಲ್ಲಿ 2026ರ ಹೊಸ ವರ್ಷದಲ್ಲಿ ಜಿಲ್ಲೆಯಲ್ಲಿ ಜನತದಳ ಸಮಾವೇಶ ನಡೆಸುವ ಮೂಲಕ ಕಾಂಗ್ರೆಸ್‌ಗೆ ತಕ್ಕ ಉತ್ತರ ನೀಡಲು ನಿರ್ಧರಿಸಿದ್ದಾರೆ.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ಹಾಸನ ಮಹಾನಗರ ಪಾಲಿಕೆ, ಅರಸೀಕೆರೆ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ಚುನಾವಣಾ ಚಟುವಟಿಕೆಗಳು ಗರಿಗೆದರಿರುವ ಹೊತ್ತಿನಲ್ಲಿ ದೇವೇಗೌಡರು ಸಮಾವೇಶ ನಡೆಸುವ ಮೂಲಕ ಪಕ್ಷದ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ.

ಈ ಕುರಿತು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದೇವೇಗೌಡರು, ಕಾಂಗ್ರೆಸ್ ನಾಯಕರು ಹಾಸನದಲ್ಲಿ 70 ರಿಂದ 80 ಸಾವಿರ ಜನರನ್ನು ಸೇರಿಸಿ ದೇವೇಗೌಡರನ್ನು ಅಥವಾ ಹಾಸನ ಜಿಲ್ಲೆಯನ್ನು ಮುಗಿಸುವ ಉದ್ದೇಶದಿಂದ ಸಮಾವೇಶ ನಡೆಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜೆಡಿಎಸ್ ಕೂಡ ಶೀಘ್ರದಲ್ಲೇ ಬೃಹತ್ ಸಮಾವೇಶ ನಡೆಸಲಿದ್ದು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಎಚ್.ಡಿ.ರೇವಣ್ಣ ಹಾಗೂ ಜಿಲ್ಲೆಯ ಶಾಸಕರು ಮತ್ತು ಮುಖಂಡರೊಂದಿಗೆ ಚರ್ಚಿಸಿ ದಿನಾಂಕ ನಿಗದಿಪಡಿಸಲಾಗುವುದು ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಕೇಂದ್ರದ ವಾಜಿ ಸಚಿವ ಹೆಚ್ .ಡಿ.ಕುಮಾರಸ್ವಾಮಿ ಅವರು ಸಹ ಪದೇ ಪದೇ ಜಿಲ್ಲೆಗೆ ಭೇಟಿ ನೀಡಿ ಪಕ್ಷದ ಮುಖಂಡರೊಂದಿಗೆ ಚರ್ಚೆ ನಡೆಸುತ್ತಿದ್ದಾರೆ. ಭಾನುವಾರಷ್ಟೇ ಚಿಕ್ಕಮಗಳೂರಿಗೆ ತೆರಳುವ ಮಾರ್ಗ ಮಧ್ಯೆ ಶಾಸಕ ಹೆಚ್.ಪಿ.ಸ್ವರೂಪ್ ಅವರ ನಿವಾಸದಲ್ಲಿ ಸ್ಥಳೀಯ ನಾಯಕರು ಹಾಗೂ ಕಾರ್ಯಕರ್ತರೊಂದಿಗೆ ಸಭೆ ನಡೆಸಿದ ಅವರು, ಕಾಂಗ್ರೆಸ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ಜಿಲ್ಲೆಯಲ್ಲಿ ಉತ್ಸಾ ಹದಿಂದ ಸಭೆಗಳನ್ನು ನಡೆಸುತ್ತಿದೆ. ಇದಕ್ಕೆ ತಕ್ಕಂತೆ ಜೆಡಿಎಸ್ ಕೂಡ ಮುಂದಿನ ದಿನಗಳಲ್ಲಿ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಿದೆ ಎಂದು ಅವರು ಹೇಳಿದ್ದರು.

ಲೋಕಸಭಾ ಚುನಾವಣೆ ಬಳಿಕ ಜೆಡಿಎಸ್‌ನಲ್ಲಿ ಮೂಡಿದ್ದ ಮುಸುಕಿನ ವಾತಾವರಣ ಇದೀಗ ದೇವೇಗೌಡರು ಹಾಗು ಕುಮಾರಸ್ವಾಮಿ ಅವರ ಹೇಳಿಕೆಗಳಿಂದ ಹೊಸ ಉತ್ಸವ ಮೂಡುತ್ತಿದೆ. ಜನವರಿಯಲ್ಲಿ ನಡೆಯಲಿರುವ ಬೃಹತ್ ಸಮಾವೇಶವು ಕಾರ್ಯಕರ್ತರಲ್ಲಿ ಹೊಸ ಹುರುಪು ಮೂಡಿಸುವ ಜೊತೆಗೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುವ ನಿರೀಕ್ಷೆ ವ್ಯಕ್ತವಾಗಿದೆ.

ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುವ ಸಾಧ್ಯತೆ ಇರುವ ಹಿನ್ನಲೆ ಪಕ್ಷ ಸಂಘಟನೆಗೆ ಬಲ ನೀಡುವ ಉದ್ದೇಶದಿಂದ ಈ ಸಮಾವೇಶ ಆಯೋಜಿಸಲಾಗುತ್ತಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಪ್ರಜ್ವಲ್ ಪ್ರಕರಣದಿಂದ ಕುಂಠಿತಗೊಂಡಿದ್ದ ಕಾರ್ಯಕರ್ತರ ಮನೋಬಲವನ್ನು ಹೆಚ್ಚಿಸಿ, ಜಿಲ್ಲೆಯಲ್ಲಿ ಮತ್ತೆ ಜೆಡಿಎಸ್ ಅಧಿಪತ್ಯ ಸ್ಥಾಪಿಸುವ ಉದ್ದೇಶ ಈ ಸಮಾವೇಶದ ಹಿಂದಿದೆ ಎನ್ನಲಾಗುತ್ತಿದೆ.

## ಸರ್ಕಾರಿ ಸೌಲಭ್ಯ ಕಲ್ಪಿಸುವ ನೆಪದಲ್ಲಿ ವಂಚನೆ: ಪ್ರತಿಭಟನೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅಲ್ಪಸಂಖ್ಯಾತರು, ದಲಿತರ ಸಹಾಯಧನ ಯೋಜನೆಯಡಿ ಸರ್ಕಾರದ ವಿವಿಧ ಸವಲತ್ತು ಕಲ್ಪಿಸುತ್ತೇನೆಂದು ಸಾರ್ವಜನಿಕರಿಂದ ವ್ಯಕ್ತಿಯೊಬ್ಬ ಲಕ್ಷಾಂತರ ರೂಪಾಯಿ ಪೀಕಿದ್ದು ಆತನ ವಿರುದ್ಧ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ದಲಿತ ಹಕ್ಕುಗಳ ಸಮಿತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಹೆಚ್.ಆರ್.ನವೀನ್‌ಕುಮಾರ್ ಮಾತನಾಡಿ, ಹಳೇಕೋಟೆ ಹೋಬಳಿ ಚಾಕೇನಹಳ್ಳಿಕಟ್ಟೆ ಗ್ರಾಮದ ಸಿ.ಎಸ್.ನಾಗರಾಜು ಎಂಬಾತ ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆಂದು ಜನರನ್ನು ನಂಬಿಸಿ ಸಹಾಯಧನ ರೂಪದಲ್ಲಿ ಟ್ರ್ಯಾಕ್ಟರ್ ಮತ್ತು ರೋಟಾವೇಟರ್, ಮನೆ ಸಾಲ, ಕಾರು ಕೊಡಿಸುತ್ತೇನೆ. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಕೊಡಿಸುತ್ತೇನೆ. ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಮತ್ತಿತರ ಸೌಲಭ್ಯ ಕಲ್ಪಿಸುತ್ತೇನೆಂದು ರೈತರಿಂದ ಫೋನ್ ಪೇ, ಗೂಗಲ್ ಪೇ ಹಾಗು ನೇರವಾಗಿ ಹಣ ಪಡೆದಿದ್ದಾನೆ. ಸುಮಾರು 60 ಲಕ್ಷ ರೂ.ಗಿಂತ ಹೆಚ್ಚು ಪಡೆದಿದ್ದು ಮುಗ್ಧ ರೈತರು ಮೋಸದಾಟಕ್ಕೆ ಬಲಿಯಾಗಿದ್ದಾರೆ ಎಂದರು.

ಈ ಸಂಬಂಧ ಹೊಳೆನರಸೀಪುರ ನಗರ ಮತ್ತು ಗ್ರಾಮಾಂತರ ಠಾಣೆಗಳಲ್ಲಿ ನಾಲ್ಕು ಎಫ್‌ಐಆರ್ ದಾಖಲಾಗಿದೆ. ಆದರೆ, ಪೊಲೀಸರು ಈ ವರೆಗೆ ಬಂಧಿಸಿಲ್ಲ. ದಲಿತರ ಹೆಸರಿನಲ್ಲಿರುವ ಯೋಜನೆಗಳನ್ನು ಇತರರಿಗೆ ಕೊಡಿಸುವುದಾಗಿ ವಂಚನೆ ಮಾಡಿರುವ ನಾಗರಾಜು ವಿರುದ್ಧ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿ ಶೀಘ್ರ ಬಂಧಿಸಿ ನೊಂದವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಆಗ್ರಹಿಸಿದರು.

ದಲಿತ ಹಕ್ಕುಗಳ ಸಮಿತಿ ಸಂಚಾಲಕ ಎಂ.ಜಿ.ಪೃಥ್ವಿ, ಮುಖಂಡರಾದ ರಾಜಶೇಖರ್ ಹುಲಿಕಲ್, ಅರವಿಂದ್, ಶೈಲಜಾ, ವೀಣಾ, ರಮೇಶ್, ರೈತರಾದ ಪಿ.ಎಸ್.ಮಧು, ಗೋಪಾಲಕೃಷ್ಣ, ಶೃತಿ, ಲೋಕೇಶ್ ಹಾಗೂ ಇತರರಿದ್ದರು.

# ದ್ವಿತೀಯ ಪಿಯು: ಟಾಪ್ 3 ಫಲಿತಾಂಶ ಸಾಧನೆಗೆ ಶ್ರಮ

## ಜಿಲ್ಲಾದ್ಯಂತ 15 ಸಾವಿರ ಮಕ್ಕಳು | ಹಾಜರಾತಿ ನೀಡದ ಸಂಸ್ಥೆಗಳಿಗೆ ನೋಟೀಸ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಳೆದ ಬಾರಿ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯಕ್ಕೆ 11 ಸ್ಥಾನ ಪಡೆದು ಶೈಕ್ಷಣಿಕವಾಗಿ ಹಿಮ್ಮುಖವಾಗಿ ಚಲಿಸುತ್ತಿರುವ ಜಿಲ್ಲೆಯನ್ನು ಈ ಬಾರಿಯಾದರೂ ಟಾಪ್ 3 ಸ್ಥಾನಗಳಲ್ಲಿ ಕೂರಿಸಬೇಕೆಂಬ ಉದ್ದೇಶದಿಂದ ಪದವಿಪೂರ್ವ ಶಿಕ್ಷಣ ಇಲಾಖೆ ಅವಿರತ ಶ್ರಮ ವಹಿಸುತ್ತಿದೆ.

2026ರ ಏ. 16 ರಿಂದ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು ಅದಕ್ಕಾಗಿ ಈಗಿನಿಂದಲೇ ತಯಾರಿ ಮಾಡಿಕೊಳ್ಳಲಾಗುತ್ತಿದೆ. ಖಾಸಗಿ, ಅನುದಾನಿತ ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಫಲಿತಾಂಶ ವೃದ್ಧಿಗೆ ಹತ್ತು ಹಲವು ಯೋಜನೆ ಹಾಕಿಕೊಳ್ಳಲಾಗಿದೆ. ಎಲ್ಲಾ ಕಾಲೇಜುಗಳಲ್ಲಿ ಪಠ್ಯ ಬೋಧನೆ ಮುಕ್ತಾಯವಾಗಿದ್ದು, 27 ವಿಷಯಗಳ ಪುನರಾವರ್ತನೆ ಶುರುವಾಗಿದೆ. ಜನವರಿ 3 ರಿಂದ ಮೊದಲ ಪೂರ್ವ ಸಿದ್ಧತಾ ಪರೀಕ್ಷೆ ಆರಂಭವಾಗಲಿದೆ. ಆ ಹಿನ್ನೆಲೆಯಲ್ಲಿ ಉಪನ್ಯಾಸಕರು ಹಾಗು ಇಲಾಖೆ ಅಧಿಕಾರಿಗಳು ಅಂತಿಮ ಹಂತದ ಸಿದ್ಧತೆಯಲ್ಲಿ ತೊಡಗಿದ್ದಾರೆ.

### ಖಾಸಗಿ ಕಾಲೇಜುಗಳಿಗೆ ನೋಟಿಸ್

ಈ ಬಾರಿ ಫಲಿತಾಂಶ ಸುಧಾರಣೆ ಮಾತ್ರವಲ್ಲದೆ ವಿದ್ಯಾರ್ಥಿಗಳ ಹಾಜರಾತಿಗೂ ವಿಶೇಷ ಗಮನ ಹರಿಸಲಾಗಿದೆ. ಜಿಲ್ಲೆಯಲ್ಲಿ 69 ಖಾಸಗಿ ಹಾಗೂ 78 ಸರ್ಕಾರಿ ಕಾಲೇಜುಗಳಿದ್ದು, 15 ಸಾವಿರ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಆದರೆ, ಖಾಸಗಿ ಕಾಲೇಜುಗಳಲ್ಲಿ ಹಾಜರಾತಿ ದಾಖಲಿಸುವಲ್ಲಿ ವಿಳಂಬವಾಗುತ್ತಿರುವುದರಿಂದ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ಸೋಮಾರಿತನ ಪ್ರದರ್ಶಿಸುವ




ಸಂಸ್ಥೆಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡುತ್ತಿದ್ದಾರೆ. ದಿನಕ್ಕೆ ಕನಿಷ್ಟ ಎರಡು ಕಾಲೇಜುಗಳಿಗಾದರೂ ನೋಟಿಸ್ ಜಾರಿ ಮಾಡುವುದು ಅಲಿಖಿತ ನಿಯಮವಾಗಿದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ ಅವರೇ ಹಾಜರಾತಿಯನ್ನು ನಿತ್ಯ ಪರಿಶೀಲಿಸುತ್ತಿರುವುದರಿಂದ ಬೆಳಿಗ್ಗೆ 11ರ ಒಳಗೆ ಪೋರ್ಟಲ್‌ನಲ್ಲಿ ಅಪ್ಲೋಡ್ ಆಗಿರಬೇಕು. ಈ ವಿಚಾರದಲ್ಲಿ ಶೇ. 24 ರಷ್ಟು ಹಾಜರಾತಿ ಕೊರತೆ ಕಂಡುಬರುತ್ತಿದೆ. ಶೇ. 70ರಷ್ಟು ಹಾಜರಾತಿ ಕಡಿಮೆ ಇದ್ದರೆ ಅಂತಹ ವಿದ್ಯಾರ್ಥಿಗಳನ್ನು ಪರೀಕ್ಷೆಯಿಂದ ಹೊರಗಿಡಲು ತೀರ್ಮಾನಿಸಲಾಗಿದೆ. ಮಗು ಪರೀಕ್ಷೆ ಬರೆಯಬೇಕೆಂದರೆ ಹಾಜರಾತಿ ಮಾತ್ರವಲ್ಲದೆ ಕಾಲೇಜಿನಲ್ಲಿ ನಡೆಸುವ ಎರಡು ಪರೀಕ್ಷೆಗೆ ಹಾಜರಾಗಬೇಕು, ಪ್ರಾಜೆಕ್ಟ್ ಕೆಲಸ ಮಾಡಿರಬೇಕು ಎನ್ನುವುದು ಕಡ್ಡಾಯ ನಿಯಮ. ಸರ್ಕಾರಿ ಕಾಲೇಜುಗಳ ಹಾಜರಾತಿ ಶೇ. 85 ಹಾಗು ಖಾಸಗಿ ಕಲೇಜುಗಳಲ್ಲಿ ಶೇ. 83 ರಷ್ಟಿದ್ದು ಕಾಲೇಜಿನಿಂದ ಬಹಳ ದಿನಗಳ ವರೆಗೆ ದೂರವಿರುವ ಮಕ್ಕಳಿಗೆ ಹಾಲ್ ಟಿಕೆಟ್ ಸಿಗುವುದು ಅನುಮಾನ.

### ಪಾಸಿಂಗ್ ಪ್ಯಾಕೇಜ್‌ಗೆ ಕ್ರಮ

ಪಿಯುಸಿ ವಿದ್ಯಾರ್ಥಿಗಳಿಗೆ ಈ ವರ್ಷದ ಪರೀಕ್ಷೆ ಸ್ವಲ್ಪ ಕಠಿಣವಾಗಿರಲಿದೆ. ನೀಲ ನಕ್ಷೆ ಸಂಪೂರ್ಣ ಬದಲಾಗಿರುವುದರಿಂದ ಮಕ್ಕಳನ್ನು ಅದಕ್ಕೆ ಸನ್ನದ್ಧರನ್ನಾಗಿಸಬೇಕಿದೆ. ಈ ಹಿನ್ನೆಲೆಯಲ್ಲಿ ಇಲಾಖೆಯಿಂದಲೇ 2 ಪೂರ್ವ ಸಿದ್ಧತಾ ಪರೀಕ್ಷೆ ನಡೆಸಲಾಗುತ್ತಿದೆ. ಒಬ್ಬ ವಿದ್ಯಾರ್ಥಿಯೂ ಅನುತ್ತೀರ್ಣ ಆಗಬಾರದೆಂಬ ನಿಟ್ಟಿನಲ್ಲಿ ಕ್ರಮ ವಹಿಸಿರುವ ಉಪನ್ಯಾಸಕರು ಪಾಸಿಂಗ್ ಪ್ಯಾಕೇಜ್ ಕ್ರಮದ ಮೊರೆ ಹೋಗಿದ್ದಾರೆ. ಮಗು ಅಧಿಕ ಅಂಕ ಗಳಿಸದಿದ್ದರೂ ಪರವಾಗಿಲ್ಲ. ಕನಿಷ್ಟ ತೇರ್ಗಡೆಯಾಗುವಷ್ಟರ ಮಟ್ಟಿಗೆ ಪರಿಪೂರ್ಣತೆ ಸಾಧಿಸಬೇಕು. ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಮಗು ಯಾವ ವಿಷಯದಲ್ಲಿ ನಿರಾಸಕ್ತಿ ಹೊಂದಿದೆ ಎಂಬುದು ಗೊತ್ತಾಗುತ್ತದೆ. ಆ ಬಳಿಕ ತರಬೇತಿಗೊಳಿಸಲು ಕ್ರಮ ವಹಿಸಲಾಗಿದೆ.

### ಮಕ್ಕಳ ಮೇಲೆ ಹೆಚ್ಚಿದ ಒತ್ತಡ

ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲೇಬೇಕೆಂದು ಕೆಲವು ಖಾಸಗಿ ಕಾಲೇಜುಗಳು ಮಕ್ಕಳ ಮೇಲೆ ಒತ್ತಡ ಹೇರುತ್ತಿದ್ದಾರೆಂಬ ಆರೋಪಗಳು ಕೇಳಿಬಂದಿವೆ. ಪರೀಕ್ಷೆಗೆ ಕೆಲವೇ ತಿಂಗಳು ಬಾಕಿ ಇರುವುದರಿಂದ ವ್ಯಾಸಂಗವನ್ನಷ್ಟೇ ಆದ್ಯತೆಯಾಗಿರಿಸಿ ಇನ್ನಿಲ್ಲದ ತೊಂದರೆ ನೀಡಲಾಗುತ್ತಿದೆ. ಅದು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತಿದೆ. ಇಲಾಖೆ ಅಧಿಕಾರಿಗಳು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಸಂಸ್ಥೆಗಳಿಗೆ ಸೂಚನೆ ನೀಡಬೇಕೆಂದು ಪೋಷಕರೊಬ್ಬರು ಆಗ್ರಹಿಸಿದರು.

# ಬರಡು ಭೂಮಿಯಲ್ಲಿ ಚಿನ್ನದಂತ ಬೆಳೆ ಬೆಳೆದ ರೈತ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಎತ್ತ ನೋಡಿದರತ್ತ ಕಲ್ಲು ಬಂಡೆ, ಗಿಡಗಂಟಿಗಳಿಂದ ತುಂಬಿದ್ದ ಕಾಡು ಪ್ರದೇಶವು ರೈತನ ನಿರಂತರ ಶ್ರಮದ ಫಲವಾಗಿ ಕೃಷಿ ಜಮೀನಾಗಿ ಮಾರ್ಪಟ್ಟಿದ್ದು ಸಾವಯವ ಪದ್ಧತಿಯ ಮಿಶ್ರ ಬೆಳೆ ಮೂಲಕ ಬಂಗಾರದ ಬೆಳೆ ಕೈ ಸೇರುತ್ತಿದೆ.

ಇದು ತಾಲ್ಲೂಕಿನ ಹೂವಿನಹಳ್ಳಿ ಗ್ರಾಮದ ಹೆಚ್ .ಬಿ.ಮಂಜುನಾಥ್ ಅವರ ಯಶೋಗಾಥೆ. ತಮಗಿರುವ 2 ಎಕರೆ 25 ಗುಂಟೆ ಕೃಷಿ ಜಮೀನಿನಲ್ಲಿ 140 ತೆಂಗು, 600 ಅಡಿಕೆ, 110 ಹಿಮಾಸಾಗರ ಮಾವಿನ ಮರ, ಏಲಕ್ಕಿ, ಮೆಣಸು, ಸಪೋಟಾ, ವಾಟರ್ ಆಪಲ್, ಸೀಬೆ, ನಿಂಬೆ ಸೇರಿ ವಿವಿಧ ಬಗೆಯ ಹಣ್ಣಿನ ಗಿಡಗಳನ್ನು ಬೆಳೆದಿದ್ದಾರೆ.

ಅದಕ್ಕೂ ಮೊದಲು ಜಮೀನಿನ ಅಲ್ಲಲ್ಲಿ ಕಲ್ಲು ಬಂಡೆಗಳು ಇದ್ದು ಕಾರೆಗುಚ್ಚಿ ಸೇರಿ ವಿವಿಧ ಜಾತಿಯ ಗಿಡಗಂಟಿ ಬೆಳೆದು ಬೋರೆ ಪ್ರದೇಶದಂತೆ ಕಾಣುತಿತ್ತು. ಮಂಜುನಾಥ್ ಅವರು ಜೆಸಿಬಿ ಹಾಗೂ ಇತರೆ ಯಂತ್ರಗಳ ಸಹಾಯದಿಂದ ಎಲ್ಲವನ್ನೂ ತೆರವುಗೊಳಿಸಿ ಹಸಿರು ಕ್ರಾಂತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ತಮ್ಮ ಜಮೀನಿನಲ್ಲಿ ಅಳವಡಿಸಿರುವ ಎಲ್ಲಾ ಬೆಳೆಗಳಿಗೂ ಹನಿ ನೀರಾವರಿ ಪದ್ಧತಿಯೊಂದಿಗೆ ನೀರುಣಿಸುವ ವ್ಯವಸ್ಥೆ ಮಾಡಲಾಗಿದೆ. ಕಳೆದ 8 ವರ್ಷಗಳಿಂದ ಯಾವ ರಾಸಾಯನಿಕ ಗೊಬ್ಬರ ಹಾಗು ಔಷಧ ಬಳಸದೆ ಸಾವಯವ ಕೃಷಿ ಅನುಸರಿಸಿದ್ದಾರೆ. ಜಮೀನಿನಲ್ಲಿ ಒಂದಷ್ಟು ಭಾಗವನ್ನು ಕೈದೋಟ ಮಾಡಿಕೊಂಡು ಸೊಪ್ಪು ಹಾಗೂ ತರಕಾರಿ ಬೆಳೆಯುತ್ತಿದ್ದಾರೆ. ಎರಡು ಮಲೆನಾಡು ಗಿಡ್ಡ ಹಸು, ಅಮ್ಮಿಘಡ ಹಾಗೂ ಡಾರ್ಫರ್ ಕುರಿಗಳನ್ನು ಸಾಕಿದ್ದು ತಮ್ಮ ಜಮೀನಿಗೆ ಸಾಕಾಗುವಷ್ಟು ಕೊಟ್ಟಿಗೆ ಗೊಬ್ಬರ ಪಡೆಯುತ್ತಿದ್ದಾರೆ. ಅನಿವಾರ್ಯ ಇದ್ದಲ್ಲಿ ವರ್ಷದಲ್ಲಿ ಒಂದೆರಡು ಬಾರಿ ಬೇರೆ ರೈತರಿಂದ ತಿಪ್ಪೆ ಗೊಬ್ಬರ ಖರೀದಿಸಿ ಬೆಳೆಗಳಿಗೆ ನೀಡುವ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಅಮ್ಮಿಘಡ ಹಾಗೂ ಡಾರ್ಫರ್ ಸೇರಿ ವಿವಿಧ ತಳಿಯ ಕುರಿಗಳನ್ನು ಸಾಕಿದ್ದು, ಹೊಸ ಹೊಸ ತಳಿಯ ಕುರಿಗಳನ್ನು ತಂದು ಅಭಿವೃದ್ಧಿಗೊಳಿಸುವ ಉದ್ದೇಶ ಹೊಂದಿದ್ದಾರೆ. ಕಳೆದ ಹತ್ತು ವರ್ಷಗಳ ಹಿಂದೆ ಯಾವ ಬೆಳೆಗಳಿಂದ ಹೆಚ್ಚು ಲಾಭ ಸಿಗುತ್ತಿರಲಿಲ್ಲ. ಆದರೆ ಸಾವಯುವ ಕೃಷಿ ಅನುಸರಿಸಿದ ನಂತರ ಎಲ್ಲಾ ಬೆಳೆಗಳಲ್ಲಿಯೂ ಹೆಚ್ಚಿನ ಇಳುವರಿಯೊಂದಿಗೆ ಸಾಕಷ್ಟು ಲಾಭ ಸಿಗುತ್ತದೆ ಎಂದು ರೈತ ಮಂಜುನಾಥ್ ತಿಳಿಸಿದರು.

ರೈತರು ಯಾವುದೋ ಒಂದು ಬೆಳೆಗೆ ಸೀಮಿತವಾಗಬಾರದು. ಜಮೀನಿನಲ್ಲಿ ಸಾಕಷ್ಟು ಗಿಡ ಮರಗಳನ್ನು ಬೆಳೆಸುವ ಮೂಲಕ ಸಮಗ್ರ ಕೃಷಿಗೆ ಆದ್ಯತೆ ನೀಡಬೇಕು. ಸಾವಯವ ಕೃಷಿಯಿಂದ ಭೂಮಿಯು ಕ್ಷೇಮ ಹಾಗು ಮನುಷ್ಯನ ಆರೋಗ್ಯವು ಉತ್ತಮವಾಗಿರುತ್ತದೆ. ಜೊತೆಗೆ ಮನೆಯ ಆರ್ಥಿಕ ಸದೃಢತೆಗೆ ಅನುಗುಣವಾಗಿ ಕುರಿ ಹಾಗೂ ಮೇಕೆಗಳನ್ನು ಸಾಕುವುದು ಒಳ್ಳೆಯ ಬೆಳವಣಿಗೆ ಎಂದು ಅವರು ಹೇಳಿದರು.

# ರಸ್ತೆ ದುರಸ್ತಿಯಾದ ದಿನವೇ ಕಿತ್ತು ಬಂದ ಡಾಂಬರು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರೇಹಳ್ಳಿ: ಗುಂಡಿಬಿದ್ದಿದ್ದ ಬೇಲೂರು-ಅರೇಹಳ್ಳಿ-ಸಕಲೇಶಪುರ ಮಾರ್ಗದ ರಸ್ತೆ ದುರಸ್ತಿ ಮಾಡಿದ ಒಂದೇ ದಿನದಲ್ಲಿ ಡಾಂಬರ್ ಕಿತ್ತುಬರುತ್ತಿದೆ. ಬೇಕಾಬಿಟ್ಟಿಯಾಗಿ ಕಾಮಗಾರಿ ನಡೆಸಲಾಗಿದೆ. ಅವೈಜ್ಞಾನಿಕವಾಗಿ ಹಂಪ್ಸ್ ಹಾಕಲಾಗಿದೆ ಎಂದು ಸ್ಥಳೀಯರು ಹಾಗು ವಾಹನ ಸವಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೇಲೂರಿನಿಂದ ಅರೇಹಳ್ಳಿ ಮಾರ್ಗವಾಗಿ ಸಕಲೇಶಪುರಕ್ಕೆ ತೆರಳುವ ಮುಖ್ಯ ರಸ್ತೆ ಕಳೆದ ಒಂದು ವರ್ಷದಿಂದ ತೀವ್ರ ಹದಗೆಟ್ಟು ವಾಹನಗಳ ಸಂಚಾರಕ್ಕೆ ಸಂಕಷ್ಟ ಎದುರಾಗಿತ್ತು. ಪಟ್ಟಣದ ಹೊರವಲಯ ಲಿಂಗಾಪುರ ಗ್ರಾಮದ ಸ್ಮಶಾನದ ಮುಂಭಾಗದ ರಸ್ತೆ ಹಾಗೂ ಇನ್ನೂ ಹಲವೆಡೆ ದೊಡ್ಡ ದೊಡ್ಡ ಗುಂಡಿಗಳು ಬಿದ್ದಿದ್ದರಿಂದ ಹಲವು ಅಪಘಾತಗಳು ಸಂಭವಿಸಿದ್ದವು. ಈ ಹಿನ್ನಲೆ ಸ್ಥಳೀಯರು ಮತ್ತು ವಾಹನ ಸವಾರರು ಹಲವು ಬಾರಿ ಪ್ರತಿಭಟನೆ ನಡೆಸಲಾಗಿತ್ತು.

ನಮ್ಮ ಹೋರಾಟದ ಫಲವಾಗಿ ಶುಕ್ರವಾರದಿಂದ ರಸ್ತೆ ದುರಸ್ತಿ ಕಾಮಗಾರಿ ಕೈಗೊಂಡಿರುವುದು ಸ್ವಾಗತಾರ್ಹ. ಆದರೆ, ಸರಿಯಾದ ಪ್ರಮಾಣದಲ್ಲಿ ಜಲ್ಲಿ, ಡಾಂಬರು ಉಪಯೋಗಿಸದೆ ಬೇಕಾಬಿಟ್ಟಿಯಾಗಿ ಕೆಲಸ ನಡೆಸಲಾಗುತ್ತಿದೆ. ಹಾಕಿರುವ ಡಾಂಬರ್ ಕಿತ್ತು ಬರುತ್ತಿದೆ. ಈಗ ಮಾಡುತ್ತಿರುವ ಕಾಮಗಾರಿ ಕಳಪೆಯಾಗಿರುವುದರಿಂದ ಮುಂಬರುವ ಮಳೆಗಾಲಕ್ಕೆ ಉಳಿಯುವುದಿಲ್ಲ ಎಂದು ಆರೋಪಿಸಿದ್ದಾರೆ.

ರಸ್ತೆ ದುರಸ್ತಿ ಕಾಮಗಾರಿ ಗುಣಮಟ್ಟ ಕಳಪೆಯಾಗಿದೆ. ಕಾಮಗಾರಿ ನಡೆಸುವುದಾದರೆ ಸೂಕ್ತ ರೀತಿಯಲ್ಲಿ ಮಾಡಬೇಕು. ಅದನ್ನು ಬಿಟ್ಟು ತಮಗಿಷ್ಟಬಂದಹಾಗೆ ಮಾಡಿದರೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಆದ್ದರಿಂದ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರ ಕಾಮಗಾರಿ ಗುಣಮಟ್ಟಕ್ಕೆ ಒತ್ತು ನೀಡಬೇಕು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅದೇ ರೀತಿ ಪಟ್ಟಣದ ಹೀರಾ ಸೆಂಟರ್ ಮುಂಭಾಗ ಹಾಕಿರುವ ಹಂಪ್ಸ್ ಅವೈಜ್ಞಾನಿಕವಾಗಿದೆ. ಎತ್ತರವಾಗಿರುವುದರಿಂದ ಬಹುತೇಕ ಕಾರು ಹಾಗೂ ಬೈಕ್‌ಗಳ ತಳಭಾಗಕ್ಕೆ ತಾಗುತ್ತದೆ. ಆದ್ದರಿಂದ ಇದನ್ನು ಸಹ ಸರಿಪಡಿಸಬೇಕೆಂದು ವಾಹನ ಸವಾರರು ಆಗ್ರಹಿಸಿದ್ದಾರೆ.

# 50 ಸಾವಿರ ರೂ. ಮೌಲ್ಯದ ವೈರ್ ಕಳವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಿರ್ಮಾಣ ಹಂತದ ಮನೆಗೆ ಅಳವಡಿಸಿದ್ದ ವಿದ್ಯುತ್ ವೈರ್‌ಗಳನ್ನು ಕಳವು ಮಾಡಿರುವ ಘಟನೆ ನಗರದ ಸತ್ಯಮಂಗಲ ಬಡಾವಣೆಯಲ್ಲಿ ನಡೆದಿದೆ.

ನಿವೃತ್ತ ಸೈನಿಕ ಕುಶಾಲ್ ರಾಜು ಅವರ ಮನೆಯಲ್ಲಿ ಕಳುವಾಗಿದೆ. ಮಂಗಳವಾರ ಮಧ್ಯರಾತ್ರಿ ಮನೆಗೆ ಅಳವಡಿಸಿದ್ದ ಬಾಗಿಲಿನ ಸ್ಕ್ರೂ ಬಿಚ್ಚಿ ಒಳನುಗ್ಗಿರುವ ಕಳ್ಳ ವೈರ್ ಕಳವು ಮಾಡಿದ್ದಾನೆ. ಕ್ಯೂರಿಂಗ್‌ಗೆ ನೀರು ಹಾಕಲು ತುಂಬಿಸಿದ್ದ ಡ್ರಮ್ ಮೇಲೆ ಹತ್ತಿ ವೈರ್ ಕತ್ತರಿಸಿದ್ದಾನೆ. ಸುಮಾರು 50 ಸಾವಿರ ರೂ. ಮೌಲ್ಯದ ಸಾಮಾಗ್ರಿ ಕಳುವಾಗಿದ್ದು ಕಳ್ಳನ ಚಲನವಲನ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಡಾವಣೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

# ಪುಷ್ಪಗಿರಿ ಮಠದಲ್ಲಿ ಜ. 3ರಿಂದ ನೈಸರ್ಗಿಕ ಕೃಷಿ ಕಾರ್ಯಾಗಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪದ್ಮಶ್ರೀ ಪುರಸ್ಕೃತ, ಮಹಾರಾಷ್ಟ್ರದ ಡಾ.ಸುಭಾಷ್ ಪಾಳೇಕರ್ ಅವರಿಂದ ನೈಸರ್ಗಿಕ ಕೃಷಿ ಕುರಿತು ಜ.3 ರಿಂದ 4 ದಿನಗಳ ಕಾರ್ಯಾಗಾರವನ್ನು ಹಳೇಬೀಡಿನ ಪುಷ್ಪಗಿರಿ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರೈತ ಮುಖಂಡ ಕಣಗಾಲ್ ಮೂರ್ತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜ.3 ರಿಂದ 6ರ ವರೆಗೆ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಆಯೋಜಿಸಿರುವ ಕಾರ್ಯಾಗಾರದಲ್ಲಿ ರಸಗೊಬ್ಬರ ಅಥವಾ ಕೀಟನಾಶಕ ಬಳಸದೆಯೇ, ಬೀಜದಿಂದ ಮಾರುಕಟ್ಟೆಯವರೆಗೆ ರೈತರು ಸ್ವಾವಲಂಬಿಗಳಾಗುವಂತೆ ಮಾಡುವುದು ನೈಸರ್ಗಿಕ ಕೃಷಿ ಪದ್ಧತಿಯ ಬಗ್ಗೆ ರೈತರಿಗೆ ತಿಳಿಸಿಕೊಡಲಾಗುವುದು. ವೈಜ್ಞಾನಿಕ ಹಾಗೂ ಪ್ರಾಯೋಗಿಕ ಜ್ಞಾನವನ್ನು ಕಾರ್ಯಾಗಾರದಲ್ಲಿ ಭಾಗಿಯಾಗುವ ರೈತರಿಗೆ ನೀಡಲಾಗುವುದು ಎಂದರು.




ರೈತರು ಸಾಲದ ಸುಳಿಯಿಂದ ಹೊರಬರಲು, ಮಣ್ಣಿನ ಫಲವತ್ತತೆ ಹೆಚ್ಚಿಸಿ ರೋಗಮುಕ್ತ ಹಾಗೂ ಲಾಭದಾಯಕ ಬೆಳೆ ಬೆಳೆಯಲು ಪ್ರೇರೇಪಿಸುವುದು ಕಾರ್ಯಾಗಾರದ ಪ್ರಮುಖ ಉದ್ದೇಶವಾಗಿದೆ. ರಸಗೊಬ್ಬರಗಳ ಅವಲಂಬನೆಯಿಂದ ಉಂಟಾಗಿರುವ ನಷ್ಟ, ಸಾಲ ಮತ್ತು ಕೃಷಿಯಿಂದ ಯುವ ಜನರ ವಲಸೆ ಸೇರಿ ಹಲವು ಸಮಸ್ಯೆಗಳಿಗೆ ಪರ್ಯಾಯ ಮಾರ್ಗವಾಗಿ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳುವಂತೆ ರೈತರಿಗೆ ಕರೆ ನೀಡಲಾಗುವುದು ಎಂದು ತಿಳಿಸಿದರು.

ಯಾವುದೇ ರಸಗೊಬ್ಬರವಿಲ್ಲದೆ ಯಶಸ್ವಿಯಾಗಿ ಕೃಷಿ ಮಾಡುತ್ತಿರುವ ಸಾಧಕ ರೈತರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. ಶ್ರೀಲಂಕಾ, ವಿಯಟ್ನಾಂ, ನೆರೆಯ ಆಂಧ್ರ ಸೇರಿ ವಿವಿಧೆಡೆಗಳಿಂದ ನೂರಾರು ಮಂದಿ ರೈತರು ಭಾಗಿಯಾಗಲಿದ್ದಾರೆ. ನಾಲ್ಕು ದಿನಗಳ ಸಂಪೂರ್ಣ ನೈಸರ್ಗಿಕ ಕೃಷಿ ಪದ್ಧತಿ ಬಗ್ಗೆ ತರಬೇತಿ, ಪ್ರಯೋಜನ ಮನವರಿಕೆ ಮಾಡಿಕೊಡಲಾಗುವುದು ಎಂದರು.

ಕಾರ್ಯಾಗಾರದಲ್ಲಿ ಏಕ ಬೆಳೆ ಪದ್ಧತಿಯಿಂದ ಬಹು ಬೆಳೆ ಪದ್ಧತಿಯತ್ತ ಬದಲಾವಣೆ, ನಾಟಿ ಬೀಜಗಳ ಸಂರಕ್ಷಣೆ, ನಾಟಿ ಹಸುಗಳ ಸಗಣಿ ಹಾಗೂ ಗಂಜಲದಿಂದ ಜೀವಾಮೃತ, ಬೀಜಾಮೃತ ತಯಾರಿಕೆ, ರಾಸಾಯನಿಕ ಕೀಟನಾಶಕಗಳಿಗೆ ಪರ್ಯಾಯಗಳ ಬಳಕೆ, ಬೆಳೆಗಳ ಮೌಲ್ಯವರ್ಧನೆ ಮತ್ತು ಸಹಕಾರಿ ಮಾರಾಟ ವ್ಯವಸ್ಥೆಗಳ ಕುರಿತು ವಿವರವಾದ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಾಗಾರಕ್ಕೆ ನೋಂದಣಿ ಶುಲ್ಕವಾಗಿ ನಾಲ್ಕು ದಿನಗಳ ಊಟ-ವಸತಿ ಸೇರಿ ಒಬ್ಬರಿಗೆ 800 ರೂ. ನಿಗದಿಪಡಿಸಲಾಗಿದೆ. ಊಟ ಮತ್ತು ವಸತಿ ಸರಳವಾಗಿರುತ್ತದೆ. ಪ್ರತ್ಯೇಕ ವಸತಿ ವ್ಯವಸ್ಥೆಯನ್ನು ಅಗತ್ಯ ಇರುವವರು ಮಾಡಿಕೊಳ್ಳಬಹುದು. ಕಡೆಯ ದಿನ ಜಿಲ್ಲೆಯ ಪ್ರಗತಿಪರ ಕೃಷಿಕರನ್ನು ಭೇಟಿ ಮಾಡುವ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಜಾನಪದ ಕಲಾವಿದ ಗ್ಯಾರಂಟಿ ರಾಮಣ್ಣ ಮಾತನಾಡಿ, ಇಂದು ರೈತರು ರಾಸಾಯನಿಕ ಗೊಬ್ಬರಗಳ ಗುಲಾಮರಾಗಿದ್ದಾರೆ. ಇದರಿಂದ ಭೂಮಿಯ ಫಲವತ್ತತೆ ಹಾಳಾಗುವುದಲ್ಲದೇ ರೈತರು ಸಾಲಗಾರರಾಗಿ ಬದುಕನ್ನು ಅಂತ್ಯಗೊಳಿಸಿಕೊಳ್ಳುವಂತಾಗಿದೆ. ಇಂತಹ ವಾತಾವರಣ ಹೋಗಲಾಡಿಸಿ, ನೈಸರ್ಗಿಕ ಕೃಷಿ ಅಳವಡಿಸಿಕೊಂಡು ಎಲ್ಲರೂ ಸ್ಥಿತಿವಂತರಾಗಬೇಕು ಎಂದು ಪ್ರೇರೇಪಿಸುವುದು ಈ ಕಾರ್ಯಾಗಾರದ ಮೂಲ ಉದ್ದೇಶ ಎಂದು ಹೇಳಿದರು.

ಮಂಜು ಬಿಟ್ಟಗೊಡನಹಳ್ಳಿ, ಮರ್ಕುಲಿ ಪ್ರಕಾಶ್, ಸುರೇಶ್, ರಾಜಣ್ಣ ಇದ್ದರು.

# ಇತಿಹಾಸದಲ್ಲಿ ಈ ದಿನ

## ಡಿಸೆಂಬರ್-28

1895: ವಿಶ್ವದ ಮೊದಲ ಸಿನಿಮಾ ಪ್ರದರ್ಶನವನ್ನು ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಲ್ಯೂಮಿಯರ್ ಸಹೋದರರು ನಡೆಸಿದರು.

1912: ಭಾರತದಲ್ಲಿ ಮೊದಲ ಬಾರಿಗೆ ವಿದ್ಯುತ್ ಚಾಲಿತ ರೈಲು ಸಂಚಾರ ಆರಂಭವಾಯಿತು.

1925: ಬ್ರಿಟಿಷ್ ಆಡಳಿತದಲ್ಲಿ ಭಾರತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಕಾನೂನುಬದ್ಧ ಚಟುವಟಿಕೆಗಳಿಗೆ ಮಹತ್ವದ ತಿರುವು ದೊರಕಿತು.

1963: ಭಾರತೀಯ ವಿಜ್ಞಾನಿ ಪ್ರೊ. ಹೋಮಿ ಜೆ. ಭಾಭಾ ಅವರ ನೇತೃತ್ವದಲ್ಲಿ ಪರಮಾಣು ಶಕ್ತಿ ಕ್ಷೇತ್ರದಲ್ಲಿ ಮಹತ್ವದ ನಿರ್ಣಯಗಳು ಕೈಗೊಳ್ಳಲಾಯಿತು.

### ಜನನ

1903: ಜಾನ್ ವಾನ್ ನ್ಯೂಮನ್, ಗಣಿತಜ್ಞ ಮತ್ತು ವಿಜ್ಞಾನಿ

1954: ಡೆನ್ಸೆಲ್ ವಾಷಿಂಗ್ಟನ್, ಅಮೆರಿಕದ ಖ್ಯಾತ ನಟ

### ಮರಣ

1703: ಝೂಂಗ್ ಹೆಂಗ್, ಚೀನಾದ ಖಗೋಳಶಾಸ್ತ್ರಜ್ಞ

# 33 ಕೆ.ಜಿ. ಏಲಕ್ಕಿಯೊಂದಿಗೆ ಅಪರಿಚಿತ ಪರಾರಿ

ಸಕಲೇಶಪುರ: ಏಲಕ್ಕಿ ಖರೀದಿಸುವುದಾಗಿ ನೆಪದಲ್ಲಿ ಬಂದ ಅನಾಮಿಕ 33 ಕೆ.ಜಿ. ಏಲಕ್ಕಿ ಸಮೇತ ಪರಾರಿಯಾಗಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ವ್ಯಾಪಾರಿ ಅಬೂಬಕರ್ ಅವರ ಅಂಗಡಿಗೆ ಡಿ. 8ರಂದು ಬಂದಿದ್ದ ಅಪರಿಚಿತ ಏಲಕ್ಕಿ ಖರೀದಿ ಕುರಿತು ಚರ್ಚಿಸಿದ್ದಾನೆ. ಪ್ರತಿ ಕೆ.ಜಿ.ಗೆ 2,700 ರೂ.ನಂತೆ 33 ಕೆ.ಜಿ. ತೂಕ ಹಾಕಿಸಿದ್ದಾನೆ. ನಂತರ 89,100 ರ ರೂ. ಕೊಡಬೇಕೆಂದು ಅಬೂಬಕರ್ ಅವರು ಹೇಳಿದಾಗ ಹಾಗೆಯೇ ಹಿಂದಿಯಲ್ಲಿ ಮಾತನಾಡುತ್ತಾ ಪಕ್ಕದ ಹೋಟೆಲ್‌ಗೆ ಟೀ ಕುಡಿಯಲು ಕರೆದುಕೊಂಡು ಹೋಗಿದ್ದಾನೆ. ಅಬೂಬಕರ್ ಹೋಟೆಲ್‌ನಲ್ಲಿ ಇದ್ದಾಗಲೇ ಏಕಾಏಕಿ ಹೊರಗಡೆ ಬಂದ ಆತ ಏಲಕ್ಕಿ ಚೀಲವನ್ನು ಬೈಕ್ ಮೇಲಿಟ್ಟುಕೊಂಡು ಪರಾರಿಯಾಗಿದ್ದಾನೆ. ಮುಖಕ್ಕೆ ಮಾಸ್ಕ್ ಧರಿಸಿದ್ದರಿಂದ ಆತನ ಮುಖ ಚಹರೆಯು ತಿಳಿದಿಲ್ಲ. ಆತನನ್ನು ಪತ್ತೆ ಹಚ್ಚಿ ನಷ್ಟ ಭರಿಸಿಕೊಡಬೇಕೆಂದು ವ್ಯಾಪಾರಿ ಪಟ್ಟಣ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248